**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ: ಸಿ4(7)ಪ್ರೌ.ಶಿ.ಮಾ.ಹ.ಅ(ವರ್ಗ)01/2012-13 ದಿನಾಂಕ: 08.05.2012

**ಜ್ಞಾಪನ**

ವಿಷಯ: 2012-13ನೇ ಸಾಲಿನಲ್ಲಿ ಘಟಕದೊಳಗೆ ವರ್ಗಾವಣೆ ಕೋರಿದ ಶಿಕ್ಷಕರಿಗೆ ಕೌನ್ಸೆಲಿಂಗ್‌ಗೆ ಹಾಜರಾಗಲು ವೇಳಾಪಟ್ಟಿ ಪ್ರಕಟಿಸುವ ಬಗ್ಗೆ.

**********

ಈ ಕೆಳಕಂಡಂತೆ ಅಗತ್ಯ ಕ್ರಮಕೈಗೊಳ್ಳಲು ವರ್ಗಾವಣಾ ಪ್ರಾಧಿಕಾರಿಗಳಿಗೆ ತಿಳಿಸಿದೆ.

- ದಿನಾಂಕ: 10.05.2012 ರಿಂದ 15.05.2012 ರವರೆಗೆ ನಡೆಯುವ ವರ್ಗಾವಣೆಗೆ ಪ್ರತಿದಿನ ಎಷ್ಟು ಶಿಕ್ಷಕರನ್ನು ಕರೆಯಬೇಕೆಂದು ಆಯಾ ವರ್ಗಾವಣಾ ಪ್ರಾಧಿಕಾರಿಗಳು ನಿರ್ಧರಿಸಿ ಕೌನ್ಸೆಲಿಂಗ್‌ಗೆ ವೇಳಾಪಟ್ಟಿ ತಯಾರಿಸಿ ವರ್ಗಾವಣಾ ಪ್ರಾಧಿಕಾರದ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟಿಸುವುದು.
- ವರ್ಗಾವಣಾ ಪ್ರಾಧಿಕಾರಿಗಳು ತೀವ್ರಖಾಯಿಲೆಗೆ ಸಂಬಂಧಿಸಿದಂತೆ, ಅರ್ಹ ಪ್ರಕರಣಗಳ ಬಗ್ಗೆ ಖಚಿತ ಮಾಹಿತಿಯನ್ನು ಆಯಾ ವಿಭಾಗದ ಅಂತರಘಟಕದ ವರ್ಗಾವಣಾ ಪ್ರಾಧಿಕಾರಿಗಳಿಂದ ದಿನಾಂಕ: 08.05.2012 ರಂದು ಪಡೆದು ದಿನಾಂಕ: 09.05.2012 ರಂದು ಆದ್ಯತಾಪಟ್ಟಿ ಪರಿಷ್ಕರಿಸಿ ಸೂಚನಾ ಫಲಕದಲ್ಲಿ ಹಾಗು ವೆಬ್‌ಸೈಟಿನಲ್ಲಿ ಪ್ರಕಟಿಸುವುದು.
- ಖಾಲಿ ಹುದ್ದೆ ಮಾಹಿತಿಯನ್ನು ದಿನಾಂಕ: 09.05.2012 ರ ಸಂಜೆ 5.30 ರವರೆಗೆ ಸಂಬಂಧಿಸಿದ ಉಪನಿರ್ದೇಶಕರು ಸರಿಪಡಿಸಲು ಅವಕಾಶ ಕಲ್ಪಿಸಿದೆ. ನಂತರದಲ್ಲಿ ವರ್ಗಾವಣಾ ತಂತ್ರಾಂಶದಲ್ಲಿ ಅಳವಡಿಸಿರುವ ಖಾಲಿ ಹುದ್ದೆ ಮಾಹಿತಿಯನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.

ನಿರ್ದೇಶಕರು (ಪ್ರೌಢಶಿಕ್ಷಣ)

ಗೆ

1. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು
2. ವಿಭಾಗೀಯ ಕಾರ್ಯದರ್ಶಿಗಳು ಮತ್ತು ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು/ಬೆಂಗಳೂರು/ಗುಲ್ಬರ್ಗಾ/ಬೆಳಗಾವಿ ವಿಭಾಗ.
3. DPIs.

\\Typing3server\typing3server\E\mamatha\trans.faq.doc